ಬರಲೇಬೇಕು ಎಂದಿದ್ದೆ. ಆದರೆ ಆಕೆ ನಾನು ಯಾರ್ಯಾರ ಎದುರು ಬಂದು ನಮ್ಮ ಬೆಡ್‌ರೂಮಿನ ಕತೆಯನ್ನು ಹೇಗೆ ಹೇಳಲಿಕ್ಕೆ ಆಗುತ್ತದೆ ಅಮ್ಮಾ?' ಎಂದು ನನಗೇ ಪ್ರಶ್ನೆ ಹಾಕಿದ್ದಾಳೆ. ನಾನು ಅದಕ್ಕೆ 'ಕೋರ್ಟಿನಲ್ಲಿ ಅದನ್ನೆಲ್ಲ ಕೇಳದೆ ಬಿಡುತ್ತಾರಾ?' ಎಂದು ಮರುಪ್ರಶ್ನೆ ಹಾಕಿದ್ದೆ. ಆಗ 'ನೋಡೋಣ' ಎಂದಿದ್ದಾಳೆ. ಹಾಗಾಗಿ ಅವಳು ಬರುತ್ತಾಳಾ ಇಲ್ಲವಾ ಎಂದು ನನಗೆ ಗೊತ್ತಿಲ್ಲ. ಒಂದು ವೇಳೆ ಬಾರದೇ ಇದ್ದರೆ, ನನ್ನ ಜೊತೆ ನೀವೂ ಅವಳಿದ್ದಲ್ಲಿಗೆ ಹೋಗಿ, ಇಬ್ಬರೂ ಅವಳನ್ನು ಸಂತೈಸಬೇಕು' ಎಂದಳು.

ರಾಯರಿಗೆ ಸಮಸ್ಯೆ ಸರಳ ಅಲ್ಲ ಅನಿಸಿತು. ಅವರು 'ಈ ವಿಚಾರದಲ್ಲಿ ನಾವು ಮನಃಶಾಸ್ತ್ರಜ್ಞರನ್ನು ಮತ್ತು ವಕೀಲರನ್ನು ಪ್ರತ್ಯೇಕ ಪ್ರತ್ಯೇಕವಾಗಿ ನೋಡಬೇಕು ಎಂದು ಕಾಣುತ್ತದೆ. ಅದು ಹೇಗೆ? ಯಾವಾಗ? ಎನ್ನುವುದನ್ನೆಲ್ಲ ನಾನಲ್ಲ, ನೀನೇ ಡಿಸೈಡ್ ಮಾಡಬೇಕು. ಬಹುಶಃ ಒಂದು ವಾರ ಕಾಲ ರಜೆ ಹಾಕಿ ನನ್ನ ಜೊತೆ ನೀನು ಓಡಾಡಬೇಕಾಗಬಹುದು ಅನಿಸುತ್ತದೆ' ಎಂದರು.

ಜಯಂತಿ 'ರಜೆ ಹಾಕುವುದು ನನಗೆ ಸಮಸ್ಯೆಯೇ ಅಲ್ಲ ಅಣ್ಣ! ನನಗೆ ಸಿ.ಎಲ್. ಸಾಕಷ್ಟಿದೆ ಅಥವಾ ಹತ್ತು ದಿನದ ಇ.ಎಲ್. ತೆಗೆದರೂ ಇಲ್ಲ ಎನ್ನಲಾರರು ನಮ್ಮ ಪ್ರಾಂಶುಪಾಲರು. ಅವರಿಗೂ ಪರೋಕ್ಷವಾಗಿ ನಾನು ಈ ವಿಷಯ ಆಗಲೇ ತಿಳಿಸಿದ್ದೇನೆ. ಅವರು ತುಂಬಾ ನೊಂದುಕೊಂಡು 'ವೆರಿ ಬ್ಯಾಡ್, ವೆರಿ ಬ್ಯಾಡ್' ಎಂದು ನನ್ನನ್ನು ಸಂತೈಸಿದ್ದಾರೆ' ಎಂದ ಆಕೆ, 'ಅಣ್ಣ, ನೀವು ವಾರ ಅಥವಾ ಎರಡೇ ಎರಡು ದಿನ ಉಳಿದರೂ ಸರಿಯೇ. ಅದು ನನಗೆ ನೀವು ಮಾಡುವ ದೊಡ್ಡ ಉಪಕಾರ. ಅದಕ್ಕಾಗಿ ನೀವು ಇರುವಷ್ಟು ದಿನಗಳ ಅನುಕೂಲಕ್ಕಾಗಿ ನನ್ನ ಮಗಳು ಇಲ್ಲಿಗೆ ಬಂದಾಗ ಉಳಕೊಳ್ಳುವ ಬೆಡ್‌ರೂಮನ್ನೇ ನಿಮಗೆ ಕೊಡುತ್ತೇನೆ. ಅಲ್ಲೇ ನಿಮ್ಮ ವಾಸ್ತವ್ಯ ಇರಲಿ. ಅದು ನನ್ನ ಬೆಡ್‌ರೂಮಿಗೆ ಕ್ವಯಟ್ ಒಪೋಸಿಟ್ ಆಗಿ ಇದೆ ನೋಡಿ' ಎನ್ನುತ್ತಾ ಆ ತನಕ ಚಾವಡಿಯಲ್ಲೇ ಇದ್ದ ಸೂಟ್‌ಕೇಸನ್ನು ತನ್ನ ಮಗಳು ಬಂದಾಗ ಉಳಿದುಕೊಳ್ಳುವ ಬೆಡ್‌ರೂಮಿನ ಒಳಗೆ ತಂದಿಟ್ಟು, 'ನೀವು ಇಲ್ಲಿ ರೆಸ್ಟ್ ಮಾಡಿ, ನಾನು ತಿಂಡಿ ರೆಡಿ ಮಾಡಿ ಕರೆಯುತ್ತೇನೆ' ಎಂದಳು.

ರಾಯರು ಆ ರೂಮಿನ ಒಳಹೊಕ್ಕರು. ಅವರು ಅದರ ಅಂದಚೆಂದವನ್ನು ನೋಡುತ್ತಾ 'ತುಂಬಾ ಆಧುನಿಕವಾಗಿ ಶೃಂಗರಿಸಿದ್ದಾಳೆ ಆಯುಷಿ ಈ ರೂಮನ್ನು!' ಎಂದು ಖುಷಿಪಟ್ಟರು. ಹಾಸಿಗೆಯಲ್ಲಿ ಕಾಲುಚಾಚಿ, ಆಮೇಲೆ ಎದ್ದು ಕುಳಿತು 'ತಿಂಡಿ ತಿಂದು ಮಲಗಿದರಾಯಿತು' ಎಂದು ಮರಳಿ ಚಾವಡಿಗೆ ಕಾಲಿಟ್ಟರು.

ಅಷ್ಟರಲ್ಲಿ ಜಯಂತಿ ದೋಸೆ ಹೊಯ್ದು ಬೆಳಗ್ಗೆಯೇ ಸಿದ್ಧ ಮಾಡಿ ಇಟ್ಟಿದ್ದ ಸಾಂಬಾರು ಮತ್ತು ಚಟ್ನಿಯನ್ನು ಡೈನಿಂಗ್ ಟೇಬಲ್ಲಿನ ಮೇಲೆ ತಂದಿರಿಸಿ, 'ಬನ್ನಿ ಅಣ್ಣ, ಉಪಾಹಾರ ರೆಡಿ ಆಗಿದೆ' ಎಂದು ರಾಯರನ್ನು ಆಹ್ವಾನಿಸಿದಳು.

ರಾಯರು ಅದು ಇದು ಮಾತನಾಡುತ್ತಾ 'ಗಂಟೆ ಹತ್ತೂವರೆ ಅಯಿತು ಜಯಂತಿ. ನೀನು ಈ ಸಂಜೆ ಕಾಲೇಜಿಗೆ ಹೋಗಬಹುದೋ ಏನೋ!' ಎನ್ನುತ್ತಾ 'ನನ್ನನ್ನು ಒಂದು ಗಂಟೆಗೆ ಎಬ್ಬಿಸಿ ಒಂದಿಷ್ಟು ಅನ್ನ ಹಾಕಿ ನೀನು ಕಾಲೇಜಿಗೆ ಹೋಗಬಹುದುದು' ಎಂದರು. ಜಯಂತಿ ಅದಕ್ಕೆ ಪ್ರತಿಕ್ರಿಯೆ ನೀಡಲಿಲ್ಲ.

ರಾಯರಿಗೆ ಹಾಸಿಗೆಯಲ್ಲಿ ಕಾಲು ಚಾಚಿದ ತಕ್ಷಣ ನಿದ್ದೆ ಬಂತು. ಮುನ್ನಾ ದಿನ ಬಸ್ ಕೆಟ್ಟು ಹೋದ ಮೇಲೆ ಅವರಿಗೆ ಬಸ್ಸಿನಲ್ಲಿ ಮಲಗಲೂ ಆಗಲಿಲ್ಲ. ಕೂರಲೂ ಆಗಲಿಲ್ಲ ಎಂಬಂತಾಗಿತ್ತು. ಒಮ್ಮೆ ಬಸ್ಸಿನಿಂದ ಕೆಳಗೆ ಇಳಿದು ಆಮೇಲೆ ಬಸ್ಸನ್ನು ಏರಿದ ಅವರು ಸುಮ್ಮನೇ ಎನ್ನುವಂತೆ ಟೈಮ್ ಪಾಸು ಮಾಡಲು ಏನೇನೂ ಸರ್ಕಸ್ ಮಾಡಿದ್ದರು. ಇದರಿಂದ ಅವರಿಗೆ ಹಿಂದಿನ ರಾತ್ರೆಯ ಪ್ರಯಾಣದ ಸುಖಾನುಭವ ದೂರಹೋಗಿ ರಾತ್ರೆ ಇಡೀ ಜಾಗರಣವಾಗಿ ಒಂದು ರೀತಿಯ ಸುಸ್ತು ಮತ್ತು ಮೈಕೈ ನೋವು ಕಾಣಿಸಿತ್ತು. ಅದೇ ಕಾರಣವಾಗಿ ನಿದ್ದೆಹೋದ ರಾಯರನ್ನು ಸುಮಾರಾಗಿ ಒಂದು ಗಂಟೆಯ ಹೊತ್ತಿಗೆ ಜಯಂತಿ 'ಅಣ್ಣ' 'ಅಣ್ಣ' ಎಂದು ಕರೆದು ಎಬ್ಬಿಸಿದಳು. ರಾಯರು 'ಹ್ಞೂ' ಎಂದು ಗಡಬಡಿಸಿ ಎದ್ದು ಊಟಕ್ಕೆದ್ದರು.

ಊಟ ತೀರಿಸಿದ ಮೇಲೆ ರಾಯರು ಆ ದಿನದ ಪತ್ರಿಕೆಯನ್ನು ಮಗುಚಿ ಹಾಕುತ್ತಿದ್ದ ಹಾಗೆ ಜಯಂತಿ, 'ಅಣ್ಣ ನನಗೆ ಮೂರು ಗಂಟೆಗೆ ಒಂದು ಪೀರಿಯಡ್ ಇದೆ. ನೀವು 'ಎಸ್' ಅಂದರೆ ನಾನು ಸಂಜೆ ನಾಲ್ಕು ಮೂವತ್ತರ ಒಳಗೇ ಬರುತ್ತೇನೆ. ಮೂರು ಮೂರೂವರೆ ಸುಮಾರಿಗೆ ನಿಮಗೆ ಟೀ ಅಭ್ಯಾಸ ಇರಬಹುದು ಎಂದಾದರೆ, ನಾನು ಟೀ ರೆಡಿ ಮಾಡಿ ಫ್ಲಾಸ್ಕಿನಲ್ಲಿ ತುಂಬಿ ಡೈನಿಂಗ್ ಟೇಬಲ್ಲಿನಲ್ಲಿ ಇಡುತ್ತೇನೆ' ಎಂದಳು. ರಾಯರು 'ಆಗಬಹುದು' ಎನ್ನುವಷ್ಟರಲ್ಲಿ ಆಕೆ ತನ್ನ ಬೆಡ್‌ರೂಮಿನ ಆಚೆ ನಡೆದು ಕೈಯಲ್ಲೊಂದು ಫೈಲನ್ನು ಹಿಡಿದುಕೊಂಡು ಬಂದಳು. 'ನೀವು ಇನ್ನು ನಿದ್ದೆ ಹೊಡೆಯವುದಿಲ್ಲ ಎಂದಾದರೆ, ಈ ಫೈಲು ನೋಡಬಹುದು. ಇದರಲ್ಲಿ ಒಂದಿಷ್ಟು ಕತೆಗಳಿವೆ. ಆಮೇಲೆ ಇವುಗಳಲ್ಲಿ ನಿಮ್ಮ ಮೊದಲ ಆಯ್ಕೆ ಯಾವುದು ಎಂದು ನನಗೆ ತಿಳಿಸಿದರೆ ತುಂಬಾ ಅನುಕೂಲವಾಗುತ್ತದೆ' ಎನ್ನುತ್ತಾ ಆ ಫೈಲನ್ನು ರಾಯರ ಕೈಗಿತ್ತಳು.

'ಕತೆಗಳಾ?' ಎಂದು ಕುತೂಹಲ ತೋರಿಸಿದ ರಾಯರು, 'ಇವು ನಿಮ್ಮ ಕಾಲೇಜು ಮ್ಯಾಗಸಿನ್‌ನಲ್ಲಿ ಪ್ರಕಟಿಸಲು ಬಂದದ್ದು ಇರಬೇಕು ಅಲ್ಲವಾ?' ಎಂದು ಪ್ರಶ್ನಿಸಿದರು. ಆ ತನಕ ನಿಂತೇ ಇದ್ದ ಜಯಂತಿ ರಾಯರ ಇದಿರಿಗಿದ್ದ ಕುರ್ಚಿಯನ್ನು ಎಳೆದು ಕುಳಿತುಕೊಳ್ಳುತ್ತಾ 'ಅಲ್ಲ ಅಣ್ಣ, ನಾವು ಅಂದರೆ ನಮ್ಮ ಕಾಲೇಜಿನವರು ರಾಜ್ಯಮಟ್ಟದ ಒಂದು ಕಥಾಸ್ಪರ್ಧೆಯನ್ನು ಈ ವರ್ಷ ಕಾಲೇಜು ಮಕ್ಕಳಿಗಾಗಿಯೇ ಏರ್ಪಡಿಸಿದ್ದೇವೆ. ನಮ್ಮ ಟ್ರಸ್ಟ್ ಸ್ಥಾಪನೆಯಾಗಿ ಈ ಏಪ್ರಿಲ್ ತಿಂಗಳಿಗೆ ಐವತ್ತು ವರುಷ ಆಗುತ್ತದಂತೆ. ಆದರೆ ಕಾಲೇಜಿಗೆ ಮಾತ್ರ ನಲುವತ್ತು ವರುಷ ಆಗುವುದಂತೆ. ನಮ್ಮ ಕಾಲೇಜು ಟ್ರಸ್ಟಿನ ಅಧ್ಯಕ್ಷರಾದ ಪಾಟೀಲರಿಗೆ ಕಳೆದ ಆರು ತಿಂಗಳಿಂದ ಮೈ ಚೆನ್ನಾಗಿಲ್ಲ, ಪಾರ್ಕಿನ್‌ಸನ್ ಡಿಸೀಸ್ ಅಂತಾರಲ್ಲ ಅದು ಬಾಧಿಸುತ್ತಿದೆ. ಅದರಿಂದಾಗಿ ಕೈ ಮತ್ತು ತಲೆ ನಡುಗುತ್ತಲೇ ಇರುತ್ತದೆ. ಸುಮಾರು ಎರಡು ವರ್ಷಗಳ ಹಿಂದೆ, ಅಂದರೆ ನೀವು ಈ ಕಾಲೇಜಿನಲ್ಲಿ ಇರುವಾಗಲೇ ಅದು ಸ್ವಲ್ಪ ಮಟ್ಟಿಗೆ ಕಾಣಿಸಿಕೊಂಡಿತ್ತಂತೆ. ಯಾಕೋ ಅವರು ಸುಮ್ಮನಿದ್ದರೆ ಅದು ಈಗ ಜಾಸ್ತಿಯಾಗಿ ಒಂದು ಕಪ್ ಟೀಯನ್ನು ಸಹ ಅವರು ಕೈಯಲ್ಲಿ ಹಿಡಿದು ಕುಡಿಯುವುದು ಕಷ್ಟವಾಗಿದೆ. ಅವರನ್ನು ನೋಡಿದಾಗೆಲ್ಲ 'ಅಯ್ಯೋ' ಅಂತ ಅನಿಸುತ್ತದೆ. ಆ ಕಾರಣದಿಂದ ಅವರು ಕಳೆದ ವರ್ಷದಿಂದ ಟ್ರಸ್ಟಿನ ಅಧ್ಯಕ್ಷತೆಯಿಂದ ನಿವೃತ್ತರಾಗಿದ್ದಾರೆ. ಆ ಸ್ಥಾನಕ್ಕೆ ಅವರ ಮಗ ಬಂದಿದ್ದಾರೆ. ಅವರು ಈಚೆಗೆ ಕಾಲೇಜಿನ ಸ್ಟಾಫ್‌ನ್ನೆಲ್ಲ ಕರೆದು, ಕಾಲೇಜಿನ ಸುವರ್ಣ ಮಹೋತ್ಸವ ಮಾಡುವ ಸಂದರ್ಭದಲ್ಲಿ ತನ್ನ ಅಪ್ಪ ಇರುತ್ತಾರೋ ಇಲ್ಲವೋ ಎಂದು ಹೇಳಲಾಗದು. ಹಾಗಾಗಿ ನಾವು ಟ್ರಸ್ಟ್ ಸ್ಥಾಪನೆಯಾಗಿ ಐವತ್ತು ವರುಷ ಆಗಿದೆ ಎಂದು ಸುವರ್ಣ ಮಹೋತ್ಸವವನ್ನು ಆ ನೆಲೆಯಲ್ಲೇ ಮಾಡೋಣ' ಎಂದಿದ್ದರು. ಆಮೇಲೆ 'ನಿಮ್ಮ ಸಜೆಶನ್ಸ್ ಇದ್ದರೆ ಹೇಳಿ' ಎಂದು ಎಲ್ಲರ ಮುಖ ನೋಡಿದ್ದರು. ಆಗ ಒಂದೊಂದು ಡಿಪಾರ್ಟ್‌ಮೆಂಟಿನವರು ಒಂದೊಂದು ರೀತಿಯ ಸಲಹೆ ನೀಡಿದ್ದರು. ನಾನು ಕಾಲೇಜು ಮಕ್ಕಳಿಗಾಗಿ ರಾಜ್ಯಮಟ್ಟದ ಒಂದು ಕಥಾಸ್ಪರ್ಧೆ ಏರ್ಪಡಿಸೋಣ ಎಂದಿದ್ದೆ. ಅದು ಮಂಜೂರಾಗಿತ್ತು. ಅಷ್ಟೇ ಅಲ್ಲ, ಈ ಸ್ಪರ್ಧೆಯಲ್ಲಿ ಗೆದ್ದವರನ್ನು ಗೌರವಿಸಲು ನಿಮ್ಮನ್ನು ಕರೆಯಿಸಬಹುದು ಎಂದು ನಾನು ನೀಡಿದ ಸೂಚನೆಯೂ ಮಾನ್ಯವಾಗಿತ್ತು' ಎಂದಳು.

'ವಂಡರ್ ಫುಲ್' ಎಂದ ರಾಯರು, 'ಹೇಗಿವೆ ಈ ಕತೆಗಳು? ನೀನು ಇವನ್ನು ಓದಿದ್ದಿ ತಾನೇ?' ಎನ್ನುತ್ತಿದ್ದಂತೆ ಜಯಂತಿ 'ಓದಿದ್ದೇನೆ ಅಣ್ಣ. ಪರವಾಗಿಲ್ಲ ಅನಿಸಿತು. ಒಟ್ಟು ನೂರಕ್ಕೂ ಹೆಚ್ಚು ಕತೆಗಳು ಬಂದಿದ್ದವು. ಅವುಗಳಲ್ಲಿ ಕೊನೆಯ ಹಂತಕ್ಕೆ ಬಂದವು ಕೇವಲ ಹದಿನಾರು ಮಾತ್ರ. ಅವುಗಳಲ್ಲೂ ನನಗೆ ಇಷ್ಟವಾದವು ಎರಡೇ ಎರಡು. ಅವುಗಳಲ್ಲಿ ಒಂದು ಕತೆ 'ಕತೆಯಿಲ್ಲದ ಕತೆ ಕತೆಯಾದ ಕತೆ' ಎಂದಿದ್ದರೆ, ಇನ್ನೊಂದು 'ಹೆಸರಿಟ್ಟು ಕರೆಯುವ ಕಷ್ಟ' ಎಂದಿದೆ' ಎಂದಳು.

'ಹೆಸರೇನೋ ಆಕರ್ಷಕವಾಗಿದೆ. ಬಟ್ 'ಕತೆಯಿಲ್ಲದ ಕತೆ ಕತೆಯಾದ ಕತೆ' ಎನ್ನುವ ಕತೆಯ ಹೆಸರು ಈ ಹಿಂದೆ ಬಹು ವಿಶಿಷ್ಟವಾದ ನೆಲೆಯಲ್ಲೇ ಯಾವುದೋ ಒಂದು ಕತೆಗಳನ್ನು ನೆನಪಿಸುವ ಹಾಗಿರಬೇಕು ಎಂದು ನನಗೆ ಅನಿಸುತ್ತದೆ. ಹಾಗೇ 'ಹೆಸರಿಟ್ಟು ಕರೆಯುವ ಕಷ್ಟ' ಎನ್ನುವ ಶಿರೋನಾಮೆ ಅಲ್ಲಮನ ಒಂದು ವಚನದ ಸಾಲು ಇದ್ದ ಹಾಗೆ ಕಾಣುತ್ತದೆ. ಏನಿದ್ದರೂ ಖಂಡಿತ ನಾನು ಎಲ್ಲಾ ಕತೆಗಳನ್ನು ಓದುತ್ತೇನೆ ಅಂತ ಈಗ ಹೇಳಲಾರೆ. ಆದರೆ ಮೊದಲು ನೀನು ಹೇಳಿದ ಎರಡು ಕತೆಗಳನ್ನು ಓದದೇ ಉಳಿದವನ್ನು ಓದಲು ಪ್ರಯತ್ನಿಸುತ್ತೇನೆ. ಯಾಕೆಂದರೆ ಆ ಎರಡು ಕತೆಗಳು ಚೆನ್ನಾಗಿವೆ ಎಂದು ನನಗೆ ಅನಿಸಿಬಿಟ್ಟರೆ ಉಳಿದದ್ದು ಚೆನ್ನಾಗಿದ್ದರೂ ಚೆನ್ನಾಗಿಲ್ಲ ಅಂತ ಅನಿಸಲೂಬಹುದು! ಹಾಗಾಗಿ ಚೆನ್ನಾಗಿಲ್ಲ ಅಂತ ಇರುವುದನ್ನು ಮೊದಲು ಓದಿ, ಆಮೇಲೆ ಚೆನ್ನಾಗಿದೆ ಎಂದು ನೀನು ಅಂದದ್ದನ್ನು ಓದೋಣ ಎಂದುಕೊಂಡಿದ್ದೇನೆ' ಎಂದರು.

(ಸಶೇಷ)